# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| 1)ಬಾರಿಕರ ಕರಿಯಮ್ಮ ಗಂಡ ಲೇಟ್ ಹನುಮಪ್ಪ,<br>2)ಬಾರಿಕರ ಚಂದ್ರಪ್ಪ ತಂದೆ ಲೇಟ್ ಹನುಮಪ್ಪ,<br>3)ಬಾರಿಕರ ಜಯಪ್ಪ ತಂದೆ ಲೇಟ್ ಹನುಮಪ್ಪ,<br>4)ಬಾರಿಕರ ಮಾಲತೇಶ ತಂದೆ ಲೇಟ್ ಹನುಮಪ್ಪ,<br>ಹ್ಯಾರಡ ಗ್ರಾಮ, ಹಡಗಲಿ ತಾ.<br>{ಶ್ರೀ ಎಸ್.ಶ್ರೀಪ್ರಕಾಶ್, ಎಸ್.ಶಿವಲಿಂಗಪ್ಪ, ವಕೀಲರು, ಹಡಗಲಿ} | ಬಾರಿಕರ ನಾಗಪ್ಪ ತಂದೆ ಕೆಂಚಪ್ಪ ತಾಯಿ ಕೆಂಚಮ್ಮ,<br>ಹ್ಯಾರಡ ಗ್ರಾಮ, ಹಡಗಲಿ ತಾ.<br>{ಶ್ರೀ ಬಸವಣ್ಯಪ್ಪ, ಜ್ಯೋತಿ ಮಲ್ಲಣ್ಣ, ವಕೀಲರು, ಹಡಗಲಿ} |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹ್ಯಾರಡ | 58/3 | 8–00 | ಖುಷ್ಕಿ |
| 2. | ,, | 186/ಬಿ/2 | 1–38 | ,, |
| 3. | ,, | 287/1 | 3–00 | ,, |

*****

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹ್ಯಾರಡ ಗ್ರಾಮದ ಸ.ನಂ.58/3 ವಿ:8–00 ಎಕ್ರೆ, 186/ಬಿ/2 ವಿ:1–38 ಮತ್ತು 287/1 ವಿ:3–00 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಹ್ಯಾರಡ ಗ್ರಾಮದ ನಿವಾಸಿಯಾದ 1)ಬಾರಿಕರ ಕರಿಯಮ್ಮ ಗಂಡ ಲೇಟ್ ಹನುಮಪ್ಪ, 2)ಬಾರಿಕರ ಚಂದ್ರಪ್ಪ ತಂದೆ ಲೇಟ್ ಹನುಮಪ್ಪ, 3)ಬಾರಿಕರ ಜಯಪ್ಪ ತಂದೆ ಲೇಟ್ ಹನುಮಪ್ಪ ಮತ್ತು 4)ಬಾರಿಕರ ಮಾಲತೇಶ ತಂದೆ ಲೇಟ್ ಹನುಮಪ್ಪ ಇವರು ಪೋತಿ ವಾರಸಾ ಪ್ರಕಾರ ಜಂಟಿ ಹಕ್ಕು ಬದಲಾವಣೆ ಮಾಡಲು ಅರ್ಜಿಯನ್ನು ದಿನಾಂಕ 21–08–2015 ರಂದು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿನಾಂಕ 29–08–2015 ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:16–09–2015 ರಂದು ಹ್ಯಾರಡ ಗ್ರಾಮದ ಬಾರಿಕರ ನಾಗಪ್ಪ ತಾಯಿ ಕೆಂಚಮ್ಮ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ನಂ.14/2015–16 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:26–10–2015 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

1) ಪ್ರಕರಣದ ವಿಚಾರಣೆಗೆ ಅರ್ಜಿದಾರರು ಮತ್ತು ತಕರಾರುದಾರರು ಹಾಜರು. ತಕರಾರುದಾರರ ಪರ ವಕೀಲರು ಹಾಜರಾಗಿ ಲಿಖಿತ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ. ಸದರಿ ಪ್ರಕರಣವು ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ರವರ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಕುಟುಂಬ ಪಾಲು ವಿಭಾಗಕ್ಕೆ ಸಂಬಂಧಿಸಿದಂತೆ ಪ್ರಕರಣ ಬಾಕಿ ಇರುತ್ತದೆ ಎಂದು ತಿಳಿಸಿರುತ್ತಾರೆ. ಅರ್ಜಿದಾರರ ಪರ ವಕೀಲರು ಹಾಜರಾಗಿ ಸ.ನಂ.663/ಎ ಗೆ ಸಂಬಂಧಿಸಿದ ಪ್ರಕರಣವು ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಪ್ರಕರಣ ಸಂ.ಕಂ.ಅಪೀಲು/130/2013–14 ಪ್ರಕರಣ ಬಾಕಿಯಿದ್ದು, ಉಳಿದ ಸರ್ವೇ ನಂಬರ್‌ಗಳಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

2) ಅರ್ಜಿದಾರರ ಪರ ವಕೀಲರು ಲಿಖಿತ ವಾದಪತ್ರ ಸಲ್ಲಿಸುತ್ತಾ, ಸ.ನಂ.58/3 ವಿ:8–00 ಎಕ್ರೆ ಜಮೀನು ಇನಾಂ ಜಮೀನಾಗಿದ್ದು, 1ನೇ ಅರ್ಜಿದಾರನ ಗಂಡ ಹಾಗೂ 2 ರಿಂದ 4 ರವರ ತಂದೆಯಾದ ಬಾರಿಕರ ಹನುಮಪ್ಪನು ಯಾಲಂನಲ್ಲಿ ರೂ.200/– ಗಳಿಗೆ ಸದರಿ ಜಮೀನನ್ನು ಪಡೆದಿದ್ದು, 40 ವರ್ಷ ಸಾಗುವಳಿ ಮಾಡಿದ್ದರಿಂದ ಟೆನೆಂಟ್ ಕಾಯ್ದೆ ಪ್ರಕಾರ ಸರ್ಕಾರಕ್ಕೆ ಪ್ರೀಮಿಯಂ ಹಣ ತುಂಬಿ, ಸರ್ಕಾರದಿಂದ ಸದರಿ ಜಮೀನಿನ ಪಟ್ಟಾ ಮಂಜೂರಾದ ಜಮೀನಾಗಿದ್ದು, ಹನುಮಪ್ಪನು ಮಾಲೀಕರಾಗಿರುತ್ತಾರೆ. ಸ.ನಂ.186/ಬಿ/2 ಮತ್ತು 287/ಬಿ/1 ಜಮೀನುಗಳನ್ನು ಬಾರಕರ ಹನುಮಪ್ಪನು ನೋಂದಾಯಿತ ಕ್ರಯ ಮೂಲದ ಪ್ರಕಾರ ಖರೀದಿ ಮಾಡಿದ್ದು, ಇವುಗಳು ಸ್ವಯಾರ್ಜಿತ ಆಸ್ತಿಯಾಗಿದ್ದು, ಪಿತ್ರಾರ್ಜಿತ ಜಮೀನಾಗಿರುವುದಿಲ್ಲ. ದಿವಂಗತ ಹನುಮಪ್ಪನು ಮತ್ತು ತಕರಾರುದಾರರಾದ ನಾಗಪ್ಪನು ಸಹೋದರರಾಗಿದ್ದು, ಇನ್ನಿತರ ಸಹೋದರರಾದ ರಾಮಪ್ಪ, ದೇವೇಂದ್ರಪ್ಪ ನಾಲ್ಕು ಜನ ಸೇರಿ ದಿ:6–6–1975 ರಲ್ಲಿ ಮೌಖಿಕವಾಗಿ ಪಿತ್ರಾರ್ಜಿತ ಆಸ್ತಿಯನ್ನು ಹಂಚಿಕೊಂಡಿದ್ದು, ಇದನ್ನು ಲಿಖಿತವಾಗಿ ನೋಂದಾಯಿತವಲ್ಲದ ಪಾಲುವಿಭಾಗವನ್ನು ದಿ:20–4–1981 ರಂದು ಪಾಲು ಮಾಡಿಕೊಂಡಿದ್ದು, ಆ ಪ್ರಕಾರ ಅವರವರ ಹಿಸ್ಸೆಗೆ ಅವರವರು ಸ್ವಾಧೀನ ಹೊಂದಿದ್ದು ಇರುತ್ತದೆ. ಸದರಿ ಪ್ರಕರಣದ ಜಮೀನುಗಳು ಸ್ವಯಾರ್ಜಿತ ಜಮೀನುಗಳು ಆಗಿರುವುದರಿಂದ ತಕರಾರುದಾರರಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ

ಅಧಿಕಾರ ಇರುವುದಿಲ್ಲ. ಹೀಗಾಗಿ ಸದರಿ ಹನುಮಪ್ಪನು ದಿ:16-10-2010 ರಂದು ಮರಣ ಹೊಂದಿದ್ದರಿಂದ ಅರ್ಜಿದಾರರು ಪೋತಿ ವಾರಸಾ ಪ್ರಕಾರ ಹನುಮಪ್ಪನಿಗೆ ಸಂಬಂಧಿಸಿದ ಜಮೀನುಗಳನ್ನು ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಪೋತಿ ವಾರಸಾ ಪ್ರಕಾರ ಅರ್ಜಿದಾರರ ಪರ ಆದೇಶ ಮಾಡಲು ಕೋರಿದರು. ಅರ್ಜಿದಾರರ ಪರ ವಕೀಲರು ನಮೂನೆ-16 ರ ಪ್ರತಿ, ಕೈ ಬರಹ ಪಹಣಿ ಪ್ರತಿಗಳು, ವಂಶವೃಕ್ಷದ ಪ್ರತಿ, ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ನ್ಯಾಯಾಲಯದ ಪ್ರಕರಣ ಸಂ.ಕಂ.ಅಪೀಲು/130/2013-14 ರ **Order Sheet** ಪ್ರತಿ ಮತ್ತು ಸದರಿ ಪ್ರಕರಣದಲ್ಲಿ ಅರ್ಜಿದಾರರು ಸಲ್ಲಿಸಿದ ಅಪೀಲು ಅರ್ಜಿಯ ಪ್ರತಿಗಳನ್ನು ಸಲ್ಲಿಸಿದರು.

3) ತಕರಾರುದಾರರ ಪರ ವಕೀಲರು ಸಲ್ಲಿಸಿದ ಲಿಖಿತ ಪ್ರತಿವಾದ ಪತ್ರದಲ್ಲಿ ಮೇಲ್ಕಂಡ ಜಮೀನುಗಳು ಈಗಾಗಲೇ ವಿವಾದಾಂಶವಾಗಿದ್ದು, ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ನ್ಯಾಯಾಲಯದ ಪ್ರಕರಣ ಸಂ.ಕಂ.ಅಪೀಲು/130/2013-14 ನ್ಯಾಯಾಲಯದಲ್ಲಿ ಪ್ರಕರಣವಿದ್ದು, ಈ ಪ್ರಕರಣವು ಇನ್ನು ವಿಚಾರಣೆ ಹಂತದಲ್ಲಿದ್ದು, ಇತ್ಯರ್ಥವಾಗಿರುವುದಿಲ್ಲ. ಹ್ಯಾರಡ ಗ್ರಾಮದ ಬಾರಿಕರ ಚಂದ್ರಪ್ಪ, ಬಾರಿಕರ ಜಯಪ್ಪ, ಬಾರಿಕರ ಮಾಲತೇಶ ಇವರಿಗೆ ಬಾರಿಕರ ಕರಿಯವ್ವ ಇವರು ದಾನಪತ್ರವನ್ನು ದಿ:05-09-2015 ರಂದು ಮಾಡಿಸಿಕೊಟ್ಟಿರುತ್ತಾಳೆ. ಆದರೆ ಈ ದಾನಪತ್ರವು ಕಾನೂನು ವಿರುದ್ಧವಾಗಿರುತ್ತದೆ. ಏಕೆಂದರೆ ಈ ಪ್ರಕರಣವು ಇನ್ನು ಹೊಸಪೇಟೆ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇರುವುದರಿಂದ ಖಾತೆ ಬದಲಾವಣೆ ಮಾಡಲು ಬರುವುದಿಲ್ಲ. ವಾದಿಗಳು ಮತ್ತು ಪ್ರತಿವಾದಿಗಳು ಇನ್ನು ಪಾಲು ಪಟ್ಟಿಯನ್ನು ಮಾಡಿಕೊಂಡಿರುವುದಿಲ್ಲ. ಇದರಿಂದ ಪ್ರತಿವಾದಿಗೆ ಈ ಜಮೀನಿನಲ್ಲಿ ಹಿಸ್ಸೆ ಇರುತ್ತದೆ. ಕಾರಣ ವಾದಿಗಳು ಕೊಟ್ಟ ಅರ್ಜಿಯನ್ನು ತಿರಸ್ಕರಿಸಲು, ವಾದಿಗಳು ಕೊಟ್ಟ ಅರ್ಜಿಯ ಪ್ರಕಾರ ಖಾತೆ ಬದಲಾವಣೆ ಮಾಡಬಾರದೆಂದು ವಿನಂತಿಸಿರುತ್ತಾರೆ. ಈಗಾಗಲೇ ಮಾನ್ಯ ಹೊಸಪೇಟೆ ನ್ಯಾಯಾಲಯದ ಪ್ರಕರಣದ ನಕಲು ಪ್ರತಿಗಳನ್ನು ಸಲ್ಲಿಸಿರುತ್ತೇನೆ. ಆದ ಕಾರಣ ವಾದಿಗಳು ಕೊಟ್ಟ ಹಕ್ಕು ಬದಲಾವಣೆ ಅರ್ಜಿಯನ್ನು ತಿರಸ್ಕರಿಸಲು ವಿನಂತಿಸಿರುತ್ತಾರೆ.

4) ತಕರಾರುದಾರರು ಸಲ್ಲಿಸಿದ ತಕರಾರು ಅರ್ಜಿಯಲ್ಲಿ ಮೇಲ್ಕಂಡ ಜಮೀನುಗಳಿಗೆ ಸಂಬಂಧಿಸಿದಂತೆ ಅರ್ಜಿದಾರರು ಹಕ್ಕು ಬದಲಾವಣೆಗೆ ಸಲ್ಲಿಸಿರುವುದು ಸರಿಯಿರುವುದಿಲ್ಲ. ಈ ಜಮೀನುಗಳ ಮೇಲೆ ಹೊಸಪೇಟೆ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಪ್ರಕರಣವಿದ್ದು, ದಿನಾಂಕ 23-10-2013 ರಂದು ಅಪೀಲು ಇದ್ದು, ನಂ/ಕಂ/ಪಹಣಿ/ಅಪೀಲು/130/13-14 ರ ನ್ಯಾಯಾಲಯದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿರುತ್ತಾರೆ. ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಇವರ ನ್ಯಾಯಲಯದಲ್ಲಿ ಸಲ್ಲಿಸಲಾದ ಅಪೀಲು ದಾಖಲೆಗಳನ್ನು ಪರಿಶೀಲಿಸಲಾಗಿ ಹೊಳಲು ಗ್ರಾಮದ ಸ.ನಂ.663/ಎ ವಿ:13-13 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷರ ಹಕ್ಕು ಬದಲಾವಣೆ ಆದೇಶ ಸಂ.ಹೆಚ್.19/2012-13 ದಿ:17-09-2012 ಅನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯದೆ 1964ರ ಕಲಂ 136(2) ರಡಿಯಲ್ಲಿ ಅಪೀಲು ಸಲ್ಲಿಸಿರುತ್ತಾರೆ. ಸದರಿ ಪ್ರಕರಣ ವಿಚಾರಣೆಯಲ್ಲಿ ಬಾಕಿ ಇರುತ್ತದೆ. ತಕರಾರುದಾರರು ಸಲ್ಲಿಸಿದ ವಂಶವೃಕ್ಷ ಅಫಿಡೆವಿಟ್ ಪ್ರತಿಯಲ್ಲಿ ಬಾರಿಕರ ಕೆಂಚಮ್ಮ ತಾಯಿ ಗಂಗಮ್ಮ(ಪೋತಿ) ಇವರಿಗೆ 1)ಬಾರಿಕರ ಹನುಮಂತಪ್ಪ 2)ರಾಮಪ್ಪ 3)ದೇವೇಂದ್ರಪ್ಪ 4)ನಾಗಪ್ಪ 5)ಸುಂದರಮ್ಮ 6)ಹೊನ್ನವ್ವ ಮತ್ತು 7)ಶಿಪ್ಪವ್ವ ಇವರು ಮಕ್ಕಳಾಗಿರುತ್ತಾರೆ. ಅರ್ಜಿದಾರರ ಬಾರಿಕರ ಹನುಮಂತಪ್ಪನ ಹೆಂಡತಿ ಮತ್ತು ಮಕ್ಕಳಾಗಿರುತ್ತಾರೆ. ತಕರಾರುದಾರರು ಬಾರಿಕರ ಹನುಮಂತಪ್ಪನ ತಮ್ಮನಾಗಿರುತ್ತಾರೆ. ತಕರಾರುದಾರರ ಪರ ವಕೀಲರು ಸಲ್ಲಿಸಿದ ಲಿಖಿತ ತಕರಾರು ಅರ್ಜಿಯಲ್ಲಿ ಅರ್ಜಿದಾರರು ಹ್ಯಾರಡ ಗ್ರಾಮದವರಾಗಿದ್ದು, ಮೇಲ್ಕಂಡ ವಿವಾದಿತ ಜಮೀನುಗಳಿಗೆ ಸಂಬಂಧಿಸಿದಂತೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ಜಮೀನು ಈಗಾಗಲೇ ವಿವಾದಾಂಶವಿದ್ದು, ಹೊಸಪೇಟೆ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಅಪೀಲು ಸಂ/ಕಂ/ಅಪೀಲು/130/2013-14 ಪ್ರಕರಣವಿದ್ದು, ಇನ್ನು ಇತ್ಯರ್ಥವಾಗಿರುವುದಿಲ್ಲ. ಪ್ರಕರಣವು ವಿಚಾರಣೆ ಹಂತದಲ್ಲಿದ್ದರೂ ಸಹ್ಯ ಹ್ಯಾರಡ ಗ್ರಾಮದ ಬಾರಿಕರ ಚಂದ್ರಪ್ಪ, ಬಾರಿಕರ ಜಯಪ್ಪ ಮತ್ತು ಬಾರಿಕರ ಮಾಲತೇಶ ಇವರಿಗೆ ಬಾರಿಕರ ಕರಿಯಮ್ಮ ಇವರುಯ ದಾನಪತ್ರವನ್ನು ದಿ:05-09-2015 ರಂದು ಮಾಡಿಕೊಟ್ಟಿರುತ್ತಾಳೆ. ಆದರೆ ಈ ದಾನಪತ್ರವು ಕಾನೂನು ವಿರುದ್ಧವಾಗಿರುತ್ತದೆ. ವಾದಿಗಳು ಮತ್ತು ಪ್ರತಿವಾದಿಗಳು ಇನ್ನು ಪಾಲುಪಟ್ಟಿಯನ್ನು ಮಾಡಿಕೊಂಡಿರುವುದಿಲ್ಲ. ಇದರಿಂದ ಪ್ರತಿವಾದಿಗೆ ಈ ಜಮೀನಿನಲ್ಲಿ ಹಿಸ್ಸೆ ಇರುತ್ತದೆ. ಆದ ಕಾರಣ ವಾದಿಗಳು ಕೊಟ್ಟ ಅರ್ಜಿಯನ್ನು ತಿರಸ್ಕರಿಸಿ, ಹಕ್ಕು ಬದಲಾವಣೆ ಮಾಡಬಾರದೆಂದು ವಿನಂತಿಸಿರುತ್ತಾರೆ.

5) ಅರ್ಜಿದಾರರ ಪರ ವಕೀಲರು ಸಲ್ಲಿಸಿದ ಲಿಖಿತ ವಾದಪತ್ರದಲ್ಲಿ ಸದರಿ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ ಅರ್ಜಿದಾರರು ಮತ್ತು ಅದಕ್ಕೆ ತಕರಾರು ಸಲ್ಲಿಸಿದವರ ಕೌಟುಂಬಿಕ ಸಂಬಂಧ ಈ ಮುಂದಿನಂತೆ ಇರುತ್ತದೆ. 1ನೇ ಅರ್ಜಿದಾರರ ಗಂಡ ಮತ್ತು 2 ರಿಂದ 4ನೇ ಅರ್ಜಿದಾರರ ತಂದೆಯಾದ ಬಾರಿಕರ ಹನುಮಪ್ಪನಿಗೆ ಸದರಿ ಪ್ರಕರಣದ ತಕರಾರುದಾರರು ಸೇರಿ ಒಟ್ಟು 4 ಜನರು ಒಡಹುಟ್ಟಿದ ಅಣ್ಣತಮ್ಮಂದಿರಿದ್ದು, ಬಾರಿಕರ ಕೆಂಚಮ್ಮನ ಮಕ್ಕಳಾಗಬೇಕು. 1ನೇ ಅರ್ಜಿದಾರರ ಗಂಡ ಹನುಮಪ್ಪ ಮತ್ತು ತಕರಾರುದಾರ ನಾಗಪ್ಪ, ಬಾರಿಕರ ರಾಮಪ್ಪ ಹಾಗೂ ಬಾರಿಕರ ದೇವೇಂದ್ರಪ್ಪ ಇವರೆಲ್ಲರ ತಾಯಿ ಕೆಂಚಮ್ಮ ಇರುತ್ತಾರೆ. ಈ ನಾಲ್ಕು ಜನರ ಮಧ್ಯೆ ಈ ಮನೆತನಕಕೆ ಒಟ್ಟಾರೆಯಾಗಿ ಇದ್ದ ಪಿತ್ರಾರ್ಜಿತ ಆಸ್ತಿಗಳಲ್ಲಿ ಈ ಎಲ್ಲರೂ ಒಟ್ಟಾಗಿ ಜೀವನ ಸಾಗಿಸಲು ಸರಿಬೀಳದ ಕಾರಣ ಎಲ್ಲಾ ನಾಲ್ಕು ಜನ ಸೇರಿ ಊರ ಹಿರಿಯರ ಸಮಕ್ಷಮ ದಿ:06-06-1975 ರಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದು, ಅದನ್ನು ದಿನಾಂಕ 20-4-1981 ರಲ್ಲಿ

ಬದಲಾವಣೆಗೆಯಾಗಿದ್ದು, ಈ ಪಾಲು ವಿಭಾಗ ಪತ್ರಕ್ಕೆ ಎಲ್ಲಾ ನಾಲ್ಕು ಜನರು ಸಹಿ ಮಾಡಿದ್ದು, ಅಂದಿನಿಂದ ಅವರವರ ಪಿತ್ರಾರ್ಜಿತ ಆಸ್ತಿಗಳನು ಅಂದಿನಿಂದಲೇ ತಮ್ಮ ತಮ್ಮ ಸ್ವಾಧೀನಾನುಭವ ಹೊಂದಿ ಆಸ್ತಿಗಳನ್ನು ಉಳಿಮೆ ಉಪಭೋಗ ಮಾಡುತ್ತಾ ಬಂದಿರುತ್ತಾರೆ. ತದನಂತರ 1ನೇ ಅರ್ಜಿದಾರರ ಗಂಡನು ಸ್ವಂತ ದುಡಿಮೆಯಿಂದ ಸುಮಾರು ಜಮೀನುಗಳನ್ನು ಸ್ವಂತಕ್ಕೆ ಖರೀದಿ ಹಿಡಿದು ತನ್ನ ಸ್ವಾಧೀನಾನುಭವದಲ್ಲಿ ಇಟ್ಟುಕೊಂಡು ಜೀವನ ಸಾಗಿಸುತ್ತಾ ಬಂದಿದ್ದು ಇರುತ್ತದೆ. ಹ್ಯಾರಡ ಗ್ರಾಮದ ಸ.ನಂ.58/3 ವಿ:8–00 ಎಕ್ರೆ ಜಮೀನು ಮೂಲತಹ ಗ್ರಾಮದ ಆಂಜನೇಯ ಸ್ವಾಮಿ ಜಮೀನಾಗಿದ್ದು, ಸದರಿ ಜಮೀನನ್ನು ಬಾರಿಕರ ಹನುಮಪ್ಪನು ದೇವಸ್ಥಾನ ಕಮಿಟಿಯಿಂದ ಯಾಲಂ ಪ್ರಕಾರ ಈ ಜಮೀನಿನ ಉಳಿಮೆ, ಉಪಭೋಗ ಮಾಡುತ್ತಾ ಸುಮಾರು 40 ವರ್ಷ ನಿರಂತರ ಸ್ವಾಧೀನಾನುಭವ ಹೊಂದಿದ್ದಕ್ಕೆ ಸದರಿಯವರಿಗೆ ಭೂ ನ್ಯಾಯಾ ಮಂಡಳಿ ಅಥವಾ ನ್ಯಾಯಾಧಿಕರಣವು ಸದರಿ ಜಮೀನಿನ ಪಟ್ಟಾ ಮಂಜೂರು ಮಾಡಿದ್ದು, ಆ ಪ್ರಕಾರ ಹಕ್ಕು ಬದಲಾವಣೆ ಆಗಿರುತ್ತದೆ. ಸದರಿ ಜಮೀನಿನ ಬಗ್ಗೆ ಬಾರಿಕರ ಹನುಮಪ್ಪನಿಗೆ ಟೆನೆಂಟ್ ಪ್ರಕಾರ ಮಾಲೀಕತ್ವ ಹೊಂದಿದ್ದು, ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಸ.ನಂ.186/ಬಿ/2 ವಿ:1–38 ಎಕರೆ ಜಮೀನನ್ನು ಬಾರಿಕರ ಹನುಮಪ್ಪನು ದಿ:20–4–1998 ರಂದು ಪಿಂಜಾರ ದೊಡ್ಡ ಹೊನ್ನೂರು ಸಾಬ್ ಇವರ ಮಗ ಹಸನ್ ಸಾಬ್ ರವರಿಂದ ರೂ.21,00/– ಗಳಿಗೆ ಡಿ.ನಂ.39/98–99 ಕ್ರಯಕ್ಕೆ ಪಡೆದಿದ್ದು, ಆ ಪ್ರಕಾರ ಎಂ.ನಂ.72/98–99 ದಿ:17–10–98 ರಂದು ಹಕ್ಕು ಬದಲಾವಣೆಯಾಗಿದ್ದು, ಅಂದಿನಿಂದ ಬಾರಿಕರ ಹನುಮಪ್ಪನು ಸ್ವಾಧೀನಾನುಭವ ಹೊಂದಿರುತ್ತಾರೆ. ಸ.ನಂ.287/1 ವಿ:3–00 ಎಕ್ರೆ ಜಮೀನನ್ನು ಬಾರಿಕರ ಹನುಮಪ್ಪನು ಕ್ರಯ ಮೂಲದ ಪ್ರಕಾರ ಗಳಿಸಿದ್ದು, ಬಾರಿಕರ ಹನುಮಪ್ಪನು ಮೃತ ಹೊಂದಿದ ಕಾರಣ ಸದರಿ ಆಸ್ತಿಯನ್ನು ಅರ್ಜಿದಾರರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಇದು ಕಾನೂನು ರೀತ್ಯ ಇದ್ದು ಹಕ್ಕು ಬದಲಾವಣೆ ಮಾಡಲು ವಿನಂತಿಸಿರುತ್ತಾರೆ. ಈ ಜಮೀನುಗಳು ಜಂಟಿ ಕುಟುಂಬದ ಆಸ್ತಿಗಳಾಗಿರುವುದಿಲ್ಲ. ತಕರಾರುದಾರರು ಯಾವತ್ತೂ ಈ ಜಮೀನಿನಲ್ಲಿ ಸ್ವಾಧೀನಾನುಭವ ಹೊಂದಿರುವುದಿಲ್ಲ. ತಕರಾರುದಾರರು ಸದರಿ ಜಮೀನುಗಳಲ್ಲಿ ಹಿಸ್ಸೆ ಕೇಳಿ ತಕರಾರು ಕೇಳಿ ತಕರಾರು ಸಲ್ಲಿಸಿರುವುದರಲ್ಲಿ ಯಾವುದೇ ಹುರುಳಿಲ್ಲ. ಹಾಗೂ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. ಎದುರುದಾರರು ತಮ್ಮ ಲಿಖಿತ ತಕರಾರರನ್ನು ಸಲ್ಲಿಸುತ್ತಾ, ಅದರಲ್ಲಿ ಅವರು ಸದರಿ ಜಮೀನಿನ ಬಗ್ಗೆ ಹೊಸಪೇಟೆ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಸಂ/ಕಂ/ಪಹಣಿ/ಅಪೀಲು/130/2013–14 ನೇ ಪ್ರಕರಣವಿದ್ದು, ಆ ಪ್ರಕಾರ ಸದರಿ ಜಮೀನುಗಳು ಆ ಪ್ರಕರಣಕ್ಕೆ ಒಳಪಟ್ಟಿದ್ದು, ಸದರಿ ಪ್ರಕರಣ ಇತ್ಯರ್ಥವಾಗುವವರೆಗೂ ಆದೇಶ ಮಾಡಬಾರದೆಂದು ತಮ್ಮ ತಕರಾರು ಸಲ್ಲಿಸಿದ್ದು ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತದೆ. ಸದರಿ ಸಂ/ಕಂ/ಪಹಣಿ/ಅಪೀಲು/130/2013–14 ನೇ ಪ್ರಕರಣದಲ್ಲಿ ಹಕ್ಕು ಬದಲಾವಣೆ ಆದೇಶ ಸಂ.ಹೆಚ್.19/2012–13 ದಿ:17–09–2012 ಸ.ನಂ.663/ಎ ದಕ್ಕೆ ಮಾತ್ರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದು, ಮೇಲ್ಕಂಡ ಯಾವ ಜಮೀನಿನ ಮೇಲೆ ಅಪೀಲು ಸಲ್ಲಿಸಿರುವುದಿಲ್ಲ. ಸದರಿ ಅಪೀಲಿನಲ್ಲಿ ಷೆಡ್ಯೂಲಿನಲ್ಲಿ ಕಾಣಿಸಿದ ಮಾತ್ರಕ್ಕೆ ಅವು ವ್ಯಾಜ್ಯಕ್ಕೆ ಒಳಪಟ್ಟ ಜಮೀನು ಆಗಿರುವುದಿಲ್ಲ. ಆದ್ದರಿಂದ ಮೇಲ್ಕಂಡ ಜಮೀನುಗಳು ಸ್ವಯಾರ್ಜಿತ ಜಮೀನುಗಳಾಗಿದ್ದು, ಇದರಲ್ಲಿ ಎದುರುದಾರರಿಗೆ ಯಾವುದೇ ಹಿಸ್ಸೆ ಕೇಳಲು ಹಕ್ಕು ಅಧಿಕಾರ ಸ್ವಾಧೀನಾನುಭವ ಹಿತಾಸಕ್ತಿ ಇಲ್ಲದಿದ್ದರೂ ವಿನಾ ಕಾರಣ ತಕರಾರನ್ನು ಸಲ್ಲಿಸಿದ್ದು, ಅದು ಕಾನೂನು ಬಾಹಿರವಾಗಿದ್ದು ಎದುರುದಾರರ ತಕರಾರನ್ನು ಪರಿಗಣಿಸದೇ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

6) ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ಪ್ರಸ್ತುತ ಮೇಲ್ಕಂಡ ಜಮೀನುಗಳು ಹಾಲಿ ಕ್ರಮವಾಗಿ ಸ.ನಂ.58/3 ವಿ:8–00 ಎಕ್ರೆ ಜಮೀನು ಬಾರಿಕರ ಹನುಮಂತಪ್ಪ, ಕೃಷ್ಣಗೌಡ ಇವರ ಹೆಸರಿಗೆ ಜಂಟಿಯಾಗಿ, ಸ.ನಂ.186/ಬಿ/2 ವಿ:1–38 ಎಕ್ರೆ ಜಮೀನು ಬಾರಿಕರ ಹನುಮಪ್ಪ ಇವರ ಹೆಸರಿಗೆ ಮತ್ತು ಸ.ನಂ.287/1 ವಿ:3–00 ಎಕ್ರೆ ಜಮೀನು ಬಾರ್ಕಿ ಹನುಮಪ್ಪ ತಂದೆ ಕೆಂಚಪ್ಪ ಇವರ ಹೆಸರಿಗೆ ಕಾಲಂ ನಂ.9 ರಲ್ಲಿ ನಮೂದು ಇರುತ್ತದೆ. ಅರ್ಜಿದಾರರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಅರ್ಜಿಯ ಜೊತೆಗೆ ಬಾರ್ಕಿ ಹನುಮಪ್ಪ ತಾಯಿ ಕೆಂಚಮ್ಮ ಇವರು ದಿ:16–10–2016 ರಂದು ಮೃತ ಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರದ ಪ್ರತಿ ಸಲ್ಲಿಸಿರುತ್ತಾರೆ. ವಂಶವೃಕ್ಷ ಪ್ರತಿಯಲ್ಲಿ ಬಾರಿಕರ ಹನುಮಪ್ಪ ಮತ್ತು ಕರಿಯಮ್ಮ ಇವರಿಗೆ 1)ಚಂದ್ರಪ್ಪ, 2)ಜೆಂಯಪ್ಪ, 3)ಮಾಲತೇಶ ಮತ್ತು 4)ಅಕ್ಕಮ್ಮ ಇವರು ಮಕ್ಕಳಾಗಿರುತ್ತಾರೆ.

7) ಅರ್ಜಿದಾರರು ಸಲ್ಲಿಸಿದ ದಾಖಲೆಗಳಲ್ಲಿ ಎಂ.ನಂ.72/98–99 ದಿ:23–6–98 ರ ಹಕ್ಕು ಬದಲಾವಣೆ ಆದೇಶದ ಪ್ರತಿಯಲ್ಲಿ ಸ.ನಂ.186/ಬಿ ಪೈಕಿ ವಿ:1–38 ಎಕರೆ ಜಮೀನನ್ನು ಪಿಂಜಾರ ದೊಡ್ಡ ಹೊನ್ನಸಾಬ್ ಇವರ ಮಗ ಹಸನ್‌ಸಾಬ ಇವರಿಂದ ಬಾರಿಕರ ಕೆಂಚಪ್ಪನವರ ಮಗ ಹನುಮಪ್ಪನು ಜೆ–ಫಾರಂ ಪ್ರಕಾರ ಖರೀದಿಸಿದ ಬಗ್ಗೆ ಆದೇಶವಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ನೋಂದಾಯಿತ ಕ್ರಯ ಪತ್ರ ಸಂ.38/1998–99 ದಿ:20–4–98 ರ ಪ್ರತಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ಕೈ ಬರಹ ಪಹಣಿ ಸ.ನಂ.287/ಅ ವಿ:3–00 ಜಮೀನು ಕಾಲಂ ನಂ.9 ರಲ್ಲಿ ಬಾರ್ಕರ ಹನ್ನಪ್ಪ S/o ಕೆಂಚಪ್ಪ ಎಂದು, ಕಾಲಂ ನಂ.10 ರಲ್ಲಿ ಕ್ರಯ ಮೂಲಕ ಅನುಭವ ಎಂದು 1968–69 ರಿಂದ ಕೈ ಬರಹ ಪಹಣಿ ಪತ್ರಿಕೆಯಲ್ಲಿ ನಮೂದು ಇರುತ್ತದೆ. ಸ.ನಂ.58 ವಿ:11–90 ಎಕರೆ 1968–69 ರಿಂದ 1980ರ ವರೆಗಿನ ಕೈ ಬರಹ ಪಹಣಿಯಲ್ಲಿ ಕಾಲಂ ನಂ.9 ರಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹ್ಯಾರಡ ಎಂದು, ಕಾಲಂ ನಂ.10 ರಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಟ್ರಸ್ಟ್ ಸ್ವಾಧೀನ ಎಂದು ಇರುತ್ತದೆ. 1681–82 ರಿಂದ 1984–85 ರವರೆಗಿನ ಕೈ ಬರಹ

ಪಹಣಿ ಕಾಲಂ ನಂ.9 ರಲ್ಲಿ ಬಾರಿಕರ ಹನುಮಂತಪ್ಪ ಇವರ ಹೆಸರಿಗೆ 8-00 ಎಕ್ರೆ ಜಮೀನು ನಮೂದು ಇದ್ದು, ಕಾಲಂ 10 ರಲ್ಲಿ ಎಲ್‌ಆರ್‌ಎಂ884/75-76 ಎಂದು ನಮೂದು ಇರುತ್ತದೆ. ಸ.ನಂ.58 ಪೈಕಿ ವಿ:8-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಎಂ.ನಂ.510 ರಲ್ಲಿ ಡಿ.ನಂ.884/75-76 ಹಡಗಲಿ ತಾಲೂಕಿನ ನ್ಯಾಯಾಧೀಕರಣವು ಕರ್ನಾಟಕ ಭೂ ಸುಧಾರಣಾ ಅಧಿನಿಯಮದ 48ರ ಪ್ರಕರಣದ (4)(5) ಉಪ ಪ್ರಕರಣದ ಮೇರೆಗೆ ಶ್ರೀ ಬಾರಿಕರ ಹನುಮಂತಪ್ಪ ಹಕ್ಕುಳ್ಳವರಾಗಿದ್ದಾರೆಂದು ಆದೇಶಿಸಿರುವುದರಿಂದ ತಹಶೀಲ್ದಾರರವರು ಹಕ್ಕು ಪತ್ರ ಶ್ರೀ ಬಾರಿಕರ ಹನುಮಂತಪ್ಪ ಹೆಸರಿನಲ್ಲಿ ಪಟ್ಟಾ ಮಂಜೂರು ಎಂದು ಆದೇಶಿರುವುದು ಇರುತ್ತದೆ.

8) ತಕರಾರುದಾರರ ಪರ ವಕೀಲರು ತಮ್ಮ ಪ್ರತಿವಾದ ಪತ್ರದಲ್ಲಿ ಹ್ಯಾರಡ ಗ್ರಾಮದ ಬಾರಿಕರ ಚಂದ್ರಪ್ಪ, ಬಾರಿಕರ ಜಯಪ್ಪ, ಬಾರಿಕರ ಮಾಲತೇಶ ಇವರಿಗೆ ಬಾರಿಕರ ಕರಿಯವ್ವ ಇವರು ದಾನಪತ್ರವನ್ನು ದಿ:05-09-2015 ರಂದು ಮಾಡಿಸಿಕೊಟ್ಟಿರುತ್ತಾಳೆ. ಆದರೆ ಈ ದಾನಪತ್ರವು ಕಾನೂನು ವಿರುದ್ಧವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಇದನ್ನು ತಿಳಿಸುವ ಅಧಿಕೃತವಾದ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ತಕರಾರುದಾರರ ಪರ ವಕೀಲರು ಮಾನ್ಯ ಸಿವಿಲ್ ನ್ಯಾಯಾಲಯ, ಹೂವಿನಹಡಗಲಿಯಲ್ಲಿ ಓ.ಎಸ್.ನಂ.80/2016 ಪ್ರಕರಣದ ಆರ್ಡರ್ ಶೀಟ್ ಮತ್ತು ಅಪೀಲು ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿ ಇರುವುದರಿಂದ ಆದೇಶ ಮಾಡಬಾರದೆಂದು ಮೌಖಿಕವಾಗಿ ಕೋರಿರುತ್ತಾರೆ. ಸದರಿ ಪ್ರಕರಣದಲ್ಲಿ ತಕರಾರುದಾರರು ಮೇಲ್ಕಂಡ ಜಮೀನುಗಳು ಪಿತ್ರಾರ್ಜಿತ ಜಮೀನುಗಳು ಎಂದು ಸಾಬೀತುಪಡಿಸುವ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿ ಅರ್ಜಿದಾರರರಾಗಲೀ ಅಥವಾ ತಕರಾರುದಾರರಾಗಲೀ ಪಿತ್ರಾರ್ಜಿತ ಜಮೀನುಗಳನ್ನು ಪಾಲು ವಿಭಾಗ ಮಾಡಿಕೊಂಡ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಸದರಿ ಮೇಲ್ಕಂಡ ಜಮೀನುಗಳು ಪಿತ್ರಾರ್ಜಿತ ಜಮೀನುಗಳಾಗಿರದೇ. ಬಾರಿಕರ ಹನುಮಂತಪ್ಪನು ಖರೀದಿಸಿದ ಮತ್ತು ಸರ್ಕಾರದಿಂದ ಮಂಜೂರಾದ ಜಮೀನುಗಳಾಗಿರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ತಕರಾರುದಾರರು ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ತಕರಾರುದಾರರು ಸದರಿ ಜಮೀನುಗಳಲ್ಲಿ ಪಾಲು ವಿಭಾಗವಾಗಿಲ್ಲ ಎಂದು ಹೇಳಿರುವುದರಲ್ಲಿ ಯಾವುದೇ ಹುರುಳಿಲ್ಲ. ಅದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/15/2015-16 — ದಿನಾಂಕ:04-07-2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ನಂ.14/2015-16 ರ ಪ್ರಕರಣದಲ್ಲಿ ಮೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಆದೇಶದಿಂದ ಬಾದೆಯುಂಟಾದಲ್ಲಿ ತಕರಾರುದಾರರು ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಂಡು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ತಹಶೀಲ್ದಾರರು,
ತಾಲೂಕು ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು,

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ. ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಮುದ್ದಪ್ರತಿ.